# ಮಹಾದೇವನೇ ಮನೆಗೆ ಬಂದಾಗ...

ಶಾರದಾ ಅಯ್ಯಂಗಾರ್

**(ಸ್ವಾಮಿ ವಿವೇಕಾನಂದರು ಚೆನ್ನೈನಲ್ಲಿ ಬಿಳಿಗಿರಿ ಅಯ್ಯಂಗಾರರ ಮನೆಯಲ್ಲಿ ಉಳಿದುಕೊಂಡಿದ್ದರು. ಅವರ ಕುಟುಂಬಕ್ಕೆ ಸೇರಿದ ಲೇಖಕಿ ತಮ್ಮ ನೆನಪಿನ ಅಂಗಳದಿಂದ ಈ ಕಥನವನ್ನು ಬರೆದಿದ್ದಾರೆ. ಇದು ಕಾಲ್ಪನಿಕವೆನಿಸಿದರೂ, ಚಾರಿತ್ರಿಕ ಅಂಶಗಳು ಇಲ್ಲದಿಲ್ಲ. ಲೇಖಕರು ಬೆಂಗಳೂರು ಆಶ್ರಮದ ಭಕ್ತರು. – ಸಂ.)**

**ಅ**ಂದು ಆ ಭವ್ಯ ಬಂಗಲೆಗೆ ಯಾರೋ ಬಹು ದೊಡ್ಡ ವ್ಯಕ್ತಿ ಬರುವವರಿದ್ದರು. ಬಂಗಲೆಯನ್ನು ಒಂದು ವಾರದಿಂದ ಈ ಭವ್ಯ ದಿನಕ್ಕಾಗಿ ಅಣಿ ಮಾಡುತ್ತಿದ್ದರು. ಮನೆಯ ಒಂದೊಂದು ಕೋಣೆಯನ್ನೂ ಸುಂದರವಾಗಿ ಸಜ್ಜುಗೊಳಿಸುತ್ತಿದ್ದರು. ಮೇಲಿನ ಮಹಡಿಯನ್ನು ವಿಶೇಷವಾಗಿ ಅಲಂಕರಿಸಿದ್ದರು. ಅಂದು ಮನೆಮಂದಿಯೆಲ್ಲಾ ಆ ಭವ್ಯ ಅತಿಥಿಗಾಗಿ ಎದುರು ನೋಡುತ್ತಿದ್ದರು.

ಬಿಳಿಗಿರಿ ಅಯ್ಯಂಗಾರ್ ತಮ್ಮ ಸಂಸಾರದೊಂದಿಗೆ ಮದ್ರಾಸ್‌ಗೆ ಹೊರಟಾಗ ಅವರ ತಂದೆತಾಯಿಗಳಿಗೆ ಯೋಚನೆಯಾಗಿತ್ತು. ಮೈಸೂರಿನ ಹತ್ತಿರದ ಬಿಳಿಗಿರಿರಂಗನ ಬೆಟ್ಟದ ರಂಗಯ್ಯನ ಒಕ್ಕಲಾದ ಅವರುಗಳು ಮೈಸೂರಿನಲ್ಲೇ ನಾಲ್ಕು ತಲೆಮಾರಿನಿಂದ ಬಾಳಿದವರು. ಅವರ ಹಿರಿಯ ಮಗ ಸ್ವಂತ ಊರನ್ನೇ ಬಿಟ್ಟು ದೂರದ ಮದ್ರಾಸ್‌ಗೆ ಹೊರಟುನಿಂತಾಗ ಅವರಿಗೆ ದೊಡ್ಡ ಚಿಂತೆಯಾಗಿತ್ತು. ಅವರ ಪ್ರೀತಿಯ ಬಿಳಿಗಿರಿ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಹಾಗೂ ಹೆಂಡತಿ ಸೀತಮ್ಮನನ್ನು ಕರೆದುಕೊಂಡು ಮದ್ರಾಸ್‌ಗೆ ಹೊರಟಿದ್ದರು.

ಮದ್ರಾಸ್ ತಲುಪಿದ ನಂತರ ಕೆಲವೇ ವರುಷಗಳಲ್ಲಿ ಬಿಳಿಗಿರಿ ತಮ್ಮ ಬುದ್ಧಿವಂತಿಕೆಯಿಂದ ಪ್ರಖ್ಯಾತ ವಕೀಲರಾಗಿ, ಸಮಾಜದಲ್ಲಿ ಸನ್ಮಾನ – ಹಣ – ಅಂತಸ್ತು ಪಡೆದರು. ಕನ್ನಡನಾಡಿನಿಂದ ಹೊಸ ನೆಲೆಯನ್ನು ಅರಸಿಬಂದ ಬಿಳಿಗಿರಿ ಅಯ್ಯಂಗಾರ್‌ಗೆ ಮದ್ರಾಸ್ ಐಶ್ವರ್ಯ, ಅಂತಸ್ತು ಎಲ್ಲವನ್ನೂ ಕೊಟ್ಟಿತ್ತು.. ಮದ್ರಾಸಿನ ಅವರ ಭವ್ಯ ಬಂಗಲೆಯು ಸ್ನೇಹಿತರು ಪರಿಚಿತರಿಂದ, ಯಾವಾಗಲೂ ತುಂಬಿರುತ್ತಿತ್ತು. ಬಿಳಿಗಿರಿ ಅಯ್ಯಂಗಾರರ ಪರಮಾಪ್ತ ಮಿತ್ರರೆಂದರೆ ಅಳಸಿಂಗ ಪೆರುಮಾಳ್, ಡಾ. ನಂಜುಂಡರಾವ್, ಕೃಷ್ಣಮಾಚಾರ್, ನರಸಿಂಹಾಚಾರ್, ಸಿಂಗಾರುವೇಲು ಮೊದಲಿಯಾರ್, ಡಾ. ಬಾಲಾಜಿ ರಾವ್, ಪ್ರೊಫೆಸರ್ ರಂಗಾಚಾರ್, ವೆಂಕಟರಂಗರಾವ್, ಪ್ರೊ. ಸುಬ್ರಹ್ಮಣ್ಯ ಅಯ್ಯರ್. ಇವರಲ್ಲಿ ಅನೇಕರು ಕನ್ನಡಿಗರು (ಇವರೆಲ್ಲರೂ ಸ್ವಾಮಿ ವಿವೇಕಾನಂದರ ಆಪ್ತರು –ಸಂ.).

ಆಗಲೇ ಒಂಬತ್ತೂವರೆ ಸಮಯವಾಗುತ್ತಾ ಬಂದಿದೆ. ಇನ್ನೂ ಬಿಳಿಗಿರಿ ಅಯ್ಯಂಗಾರರ ಕುದುರೆ ಸಾರೋಟು ಮನೆಗೆ ಬಂದಿಲ್ಲ. ಸೀತಮ್ಮ ಬೆಳ್ಳಿ ತಟ್ಟೆಯಲ್ಲಿ ಆರತಿ ಇಟ್ಟುಕೊಂಡು ಕಾಯುತ್ತಾ ಇದ್ದರು. ಬೆಳ್ಳಿ ಚೊಂಬಿನಲ್ಲಿ ಕಾಲು ತೊಳೆಯಲು ನೀರು ಸಿದ್ಧವಾಗಿಟ್ಟಿದ್ದರು. ನೀರಾಂಜನದ ಬೆಳಕು ಉರಿಯುತ್ತಿತ್ತು. ಮನೆಯ ಮುಂದೆ ದೊಡ್ಡ ಕುದುರೆ ಸಾರೋಟು ಬಂದು ನಿಂತಿತು. ಜನಜಂಗುಳಿಯ ಗಲಾಟೆಯೋ ಗಲಾಟೆ. ಅದರ ಮಧ್ಯೆ, ಬಂದವರನ್ನು ಸಾರೋಟಿನಿಂದ ಇಳಿಸಿ ಗೇಟಿನೊಳಗೆ ಕರೆದು ತರುವುದೇ ಕಷ್ಟವಾಗಿತ್ತು. ಸೀತಮ್ಮ ತಮ್ಮ ಮಕ್ಕಳ ಜೊತೆಗೆ ಮನೆಯ ಮುಂದಿನ ವರಾಂಡದಲ್ಲಿ ಆರತಿ ತಟ್ಟೆ ಹಿಡಿದು ನಿಂತರು. ಮಕ್ಕಳೆಲ್ಲಾ ಕೈಯಲ್ಲಿ ಗುಲಾಬಿ ಹೂವಿನ ದಳಗಳು, ಅಕ್ಷತೆ ಇಟ್ಟುಕೊಂಡು ನಿಂತಿದ್ದರು. ಸಾರೋಟಿನಿಂದ ಅತ್ಯಂತ ಮೋಹಕ ನಿಲುವಿನ ಭವ್ಯ ವ್ಯಕ್ತಿ, ಕಾಷಾಯ ವೇಷ ಧರಿಸಿದ ಈಶ್ವರ ಸ್ವರೂಪಿ ನಡೆದು ಬರುತ್ತಿದ್ದರು. ಅವರ ಎರಡೂ ಪಕ್ಕದಲ್ಲಿ ಬಿಳಿಗಿರಿಯವರ ಮಿತ್ರರು ಇದ್ದರು. ಗೇಟಿನ ಹೊರಗೆ ನಿಂತ ಜನ ಒಕ್ಕೊರಲಿನಿಂದ ಜಯಘೋಷ ಮಾಡುತ್ತಿದ್ದರು. ಧೀರತೆಯನ್ನು ಹೊರಸೂಸುತ್ತಿದ್ದ ಸಂನ್ಯಾಸಿ ತಮ್ಮ ವಿದೇಶಿ ಗೆಳೆಯರೊಂದಿಗೆ ಮನೆ ಬಾಗಿಲಿಗೆ ಬಂದರು. ಸೀತಮ್ಮ ಹಣೆಗೆ ತಿಲಕವಿಟ್ಟು ಆರತಿ ಎತ್ತಿದರು. ಮಕ್ಕಳೆಲ್ಲಾ ಒಬ್ಬೊಬ್ಬರಾಗಿ ಬಂದು ಸ್ವಾಮಿಗಳ ಪಾದಕ್ಕೆ ಹೂ–ಅಕ್ಷತೆ ಇಟ್ಟು ನಮಸ್ಕರಿಸಿದರು. ಆ ದಿವ್ಯ ಮಂಗಳ ಮೂರುತಿಯನ್ನು ನೋಡುತ್ತಿದ್ದವರೆಲ್ಲಾ ಮೂಕವಿಸ್ಮಿತರಾಗಿದ್ದರು. ಹೊರಗೆ ಒಂದೇ ಸಮನೆ ಒಕ್ಕೊರಲಿನಿಂದ ಜೈಕಾರ ಮಾಡುತ್ತಿದ್ದ ಜನಸ್ತೋಮಕ್ಕೆ ಕೈಮುಗಿದು ಅಳಸಿಂಗರು ಪ್ರಾರ್ಥಿಸುತ್ತಿದ್ದರು: "ನಿಮ್ಮ ಭವ್ಯ ಸ್ವಾಗತಕ್ಕೆ ನಾವೆಲ್ಲಾ ಆಭಾರಿಗಳು. ಸ್ವಾಮಿಗಳು ತುಂಬಾ ದಣಿದಿದ್ದಾರೆ. ಅವರಿಗೆ ವಿಶ್ರಾಂತಿ ಅವಶ್ಯಕ. ದಯಮಾಡಿ ಮನೆಗಳಿಗೆ ತೆರಳಿ." ಅಳಸಿಂಗರ ಪ್ರಾರ್ಥನೆಯನ್ನು ಮನ್ನಿಸಿ ಜನಸ್ತೋಮ 'ಕ್ಯಾಸಲ್ ಕರ್ನನ್' ನಿಂದ (ಬಂಗಲೆಯ ಹೆಸರು) ನಿರ್ಗಮಿಸಿತು.

ಒಂಬತ್ತು ದಿನಗಳ ಕಾಲ ಸ್ವಾಮೀಜಿ ಮದ್ರಾಸ್‌ನಲ್ಲಿ ಬಿಳಿಗಿರಿ ಅಯ್ಯಂಗಾರರ ಮನೆಯಲ್ಲಿ ತಂಗಿದರು. ಆ ಒಂದೊಂದು ದಿನವೂ ಅತ್ಯಂತ ಭವ್ಯ, ಸುಂದರ ದಿನ. ಅವರನ್ನು ಭೇಟಿ ಮಾಡಲು, ಬೆಳಗ್ಗೆ, ಸಂಜೆ, ದಿನವಿಡೀ ಜನಜಂಗುಳಿ ಕ್ಯಾಸಲ್ ಕರ್ನನ್‌ಗೆ ಬರುತ್ತಿತ್ತು. ಅವರ ಪ್ರವಚನ ಕೇಳಿ ಜನ ಮುಗ್ಧರಾದರು; ಅವರ ಸಿರಿಕಂಠದಿಂದ ಹೊಮ್ಮಿದ ಗೀತಸುಧೆಯನ್ನು ಕೇಳಿ ಮೈಮರೆತರು; ಅವರ ವಾಗ್ಝರಿಯಲ್ಲಿ ಮಿಂದು ಪುನೀತರಾದರು. ಆ ದಿನಗಳ ಆನಂದ ಪಡೆದವರೇ ಧನ್ಯರು. ಆ ಬಂಗಲೆಯಲ್ಲಿದ್ದ 'ಕುಟುಂಬ' ಯಾವ ಜನ್ಮದ ಸುಕೃತದ ಫಲವೋ ಎಂಬಂತೆ, ಸ್ವಾಮೀಜಿಯವರ ಸಾನ್ನಿಧ್ಯದಿಂದ ಪುನೀತವಾಯಿತು. ಅವರೊಡನೆ ಕಳೆದ ಒಂದೊಂದು ದಿನವೂ ರತ್ನಪ್ರಾಯವಾಗಿತ್ತು.

ಅಂದು ಪುರಭವನದ ಬಿನ್ನವತ್ತಳೆಯ ನಂತರ ಸ್ವಾಮೀಜಿ ಕ್ಯಾಸಲ್ ಕರ್ನನ್‌ಗೆ ಹಿಂತಿರುಗಿದರು. ಆ ಭವ್ಯಸೌಧವನ್ನು ತಲಪುತ್ತಿದ್ದಂತೆ – ತುಂಬಾ ಇಂಪಾದ ವೀಣಾವಾದನ ಕೇಳಿಬರುತ್ತಿತ್ತು. ಸ್ವಾಮೀಜಿ ಆ ನಿನಾದವನ್ನು ಆಸ್ವಾದಿಸಿದರು. "ಆಹಾ!" ಎಂಬ ಉದ್ಗಾರ ಅವರ ಬಾಯಿಂದ ಬಂದಿತು. ಪಕ್ಕದಲ್ಲೇ ನಿಂತಿದ್ದ ಬಿಳಿಗಿರಿಯನ್ನು ಉದ್ದೇಶಿಸಿ "ಯಾರು ನುಡಿಸುತ್ತಿದ್ದಾರೆ?" ಎಂದರು. "ನನ್ನ ಎರಡನೇ ಮಗಳು ಆಂಡಾಳ್, ಸ್ವಾಮೀಜಿ" ಎಂದರು ಬಿಳಿಗಿರಿ ಅಯ್ಯಂಗಾರ್. ಅವರ ಪ್ರೀತಿಯ ಪುತ್ಥಳಿ ಆಂಡಾಳ್, ತನ್ನ ಮನಸ್ಸಿಗೆ ಬೇಜಾರಾದಾಗಲೆಲ್ಲಾ ವೀಣೆ ಹಿಡಿದು ಕುಳಿತಳೆಂದರೆ, ಹೊತ್ತಿನ ಪರಿವೆಯಿಲ್ಲದೆ ನುಡಿಸು

ತ್ತಿದ್ದಳು. ಆ ವೀಣೆ ಅವಳ ಅಂತರಂಗದ ಭಾವವನ್ನೆಲ್ಲಾ ನಾದದ ಮೂಲಕ ಹೊರಸೂಸುತ್ತಿತ್ತು. ಸ್ವಾಮೀಜಿ ಕ್ಯಾಸಲ್ ಕರ್ನನ್‌ನ ಮೊದಲ ಮಹಡಿಯ ಮೆಟ್ಟಿಲುಗಳ ಸಾಲನ್ನು ಹತ್ತುತ್ತಿದ್ದರು. ಹಿಂದೆಯೇ ಬಿಳಿಗಿರಿ ಅವರನ್ನು ಹಿಂಬಾಲಿಸುತ್ತಿದ್ದರು. ವೀಣೆಯ ಅಪೂರ್ವ ರಾಗ ತರಂಗ ಎಲ್ಲೆಡೆ ಹರಿದುಬರುತ್ತಿತ್ತು. ಬಿಳಿಗಿರಿ ಅತ್ಯಂತ ಮೌನವಾಗಿದ್ದನ್ನು ಕಂಡು ಸ್ವಾಮೀಜಿ, "ಬಿಳಿಗಿರಿ, ಬಿಳಿಗಿರಿ" ಎಂದರು. ಬಿಳಿಗಿರಿಯವರ ಬಾಯಿಂದ ಮಾತೇ ಬರಲಿಲ್ಲ. ಸ್ವಾಮೀಜಿ ಹಿಂತಿರುಗಿ ನೋಡಿದರು. ಬಿಳಿಗಿರಿಯ ಕಣ್ಣುಗಳಿಂದ ಒಂದೇ ಸಮನೆ ಕಣ್ಣೀರು ಹರಿಯುತ್ತಿದೆ, ತುಂಬಾ ಕಷ್ಟದಿಂದ ಕೊರಳಸೆರೆ ಬಿಗಿ ಹಿಡಿದಿದ್ದಾರೆ, ಅಂಗವಸ್ತ್ರವನ್ನು ಬಾಯಿಗೆ ಒತ್ತಿದ್ದಾರೆ. ಸ್ವಾಮೀಜಿಗೆ ಆಶ್ಚರ್ಯವಾಯಿತು, "ಬಿಳಿಗಿರಿ, ಏನಾಯಿತು?" ಎಂದರು. "ಅಯ್ಯೋ, ನನ್ನ ತಂದೆ!" ಎಂದು ಸ್ವಾಮೀಜಿಯ ಪಾದಕ್ಕೆ ಬಿಳಿಗಿರಿ ಎರಗಿದರು. ಕಣ್ಣೀರಿನ ಕೋಡಿ ಹರಿಯುತ್ತಿತ್ತು, ಅವರ ಬಾಯಿಂದ ಮಾತೇ ಬರಲಿಲ್ಲ. "ಸಮಾಧಾನ ಮಾಡಿಕೊಳ್ಳಿ, ಬಿಳಿಗಿರಿ. ಏನಾಯಿತು?" ಎಂದು ಮತ್ತೆ ಸ್ವಾಮೀಜಿ ಕೇಳಿದರು. ಬಿಳಿಗಿರಿ ತುಂಬಾ ಕಷ್ಟದಿಂದ ಹೇಳಿದರು, "ಸ್ವಾಮೀಜಿ, ನನ್ನ ಈ ಇಬ್ಬರು ಹೆಣ್ಣುಮಕ್ಕಳು ಬಾಲವಿಧವೆಯರು. ಮೊದಲ ಮಗಳು ಅಮೃತಾಳನ್ನು ನಂಜನಗೂಡಿನ ಸುಂದರರಾಜನಿಗೆ ಕೊಟ್ಟಿದ್ದೆವು. ಅವನು ಒಬ್ಬ ಹೆಸರಾಂತ ಲಾಯರರ ಮಗ. ಲಾ ಪರೀಕ್ಷೆಗೆ ಓದುತ್ತಿದ್ದ, ತುಂಬಾ ಬುದ್ಧಿವಂತ. ಒಂದು ದಿನ ಬೆಳಿಗ್ಗೆ ಕಪಿಲಾ ನದಿಗೆ ಸ್ನಾನಕ್ಕೆಂದು ಹೋದವನು ಹಿಂತಿರುಗಲಿಲ್ಲ. ನನ್ನ ಮಗಳು ಅಮೃತಾ ಆಗ ಇನ್ನೂ ಹದಿನಾಲ್ಕರ ಹರೆಯದ ಬಾಲೆ. ಗಂಡನ ಮನೆಗೆ ಒಂದು ಬಾರಿ ಹೋಗಿ ಬಂದಿದ್ದಳು, ಅಷ್ಟೆ. ಆಂಡಾಳ್ ಗಂಡ ಪಾರ್ಥಸಾರಥಿಗೆ ಇಂಗ್ಲೆಂಡ್‌ಗೆ ಹೋಗಿ ಡಿಗ್ರಿ ಪಡೆಯಬೇಕೆಂದು ತುಂಬಾ ಆಸೆ ಇತ್ತು. ಅವನ ಈ ಆಸೆಗೆ ನಾನೇ ಪ್ರೋತ್ಸಾಹ ಕೊಟ್ಟು ಕಳುಹಿಸಿದೆ. ಆದರೆ ಒಂದು ವರುಷದ ನಂತರ ಆ ಶೀತದ ಹವಾಮಾನ ಒಗ್ಗದೆ ನ್ಯುಮೋನಿಯಾದಿಂದ ಮಲಗಿದವನು ಮೇಲೇಳಲಿಲ್ಲ. ಅವನನ್ನು ಆ ಸ್ಥಿತಿಯಲ್ಲಿ ನೋಡಲು ನಾನು ಇಂಗ್ಲೆಂಡ್‌ಗೆ ಹೋದೆ. ನಾನು ತಲುಪುವುದರಲ್ಲಿ ಅವನ ಸ್ಥಿತಿ ತುಂಬಾ ಕೆಟ್ಟಿತ್ತು; ಏನನ್ನೂ ಮಾಡುವುದಕ್ಕಾಗಲಿಲ್ಲ; ನಾನು ಹೋದ ನಂತರ ನನ್ನ ಮುಂದೆಯೇ ಕಣ್ಣುಮುಚ್ಚಿದ. ಹೀಗೆ ನನ್ನ ಈ ಮುದ್ದುಮಕ್ಕಳು ಬಾಳನ್ನೇ ನೋಡದೆ ಬಾಲವಿಧವೆಯರಾದರು. ನಾನೇನು ಮಾಡಲಿ ಸ್ವಾಮೀಜಿ?" ಹೀಗೆ ಹೇಳುತ್ತ, ಬಿಳಿಗಿರಿ ಅಯ್ಯಂಗಾರ್ ಸ್ವಾಮೀಜಿಯ ಪಾದಕ್ಕೆ ಎರಗಿದರು.

ಸ್ವಾಮೀಜಿ ಬಿಳಿಗಿರಿಯನ್ನು ಕೈಹಿಡಿದು ಎತ್ತಿ ಬಿಗಿದಪ್ಪಿದರು. ಅವರ ಕಂಠದ ಸೆರೆಯೂ ಬಿಗಿದಿತ್ತು. "ಆ ಮುಗ್ಧ ಮಕ್ಕಳ ಭವಿಷ್ಯ ಈ ರೀತಿಯಾಯಿತೆ? ಈ ನಂದಗೋಕುಲದಂತಹ ಸಂಸಾರದಲ್ಲಿ ಈ ದುಃಖವನ್ನು ಏಕೆ ತುಂಬಿದೆ ಗುರುದೇವಾ!" ಎಂದು ಅವರು ಬಿಸಿಸುಯ್ದರು. "ಸಮಾಧಾನ ತಂದುಕೊಳ್ಳಿ, ಬಿಳಿಗಿರಿ. ವಿಧಿಲಿಖಿತ ಯಾರು ತಪ್ಪಿಸಲು ಸಾಧ್ಯ? ನಿಮ್ಮಂತಹ ಸತ್ಪುರುಷರಿಗೆ ಇಂತಹ ನೋವು ಆ ಭಗವಂತ ಏಕೆ ಕೊಟ್ಟನೋ ತಿಳಿಯದು. ಧೈರ್ಯದಿಂದ ಈ ಸಂಕಟವನ್ನು ಎದುರಿಸಿ" ಎಂದು ಬಿಳಿಗಿರಿಯನ್ನು ಸಮಾಧಾನಪಡಿಸಿದರು. ಮಾರನೆಯ ದಿನ ಅವರು ಮೆಟ್ಟಿಲಿಳಿದು ಬಂದಾಗ ಕಣ್ಣುಗಳೆಲ್ಲಾ ಕೆಂಪಾಗಿತ್ತು. ಸ್ವಾಮೀಜಿ ಇಡೀ ರಾತ್ರಿ ನಿದ್ದೆ ಮಾಡಿದಂತೆ ತೋರಲಿಲ್ಲ. ಅಂದಿನಿಂದ ಅವರು ತುಂಬ ಅಂತರ್ಮುಖಿಯಾಗಿಬಿಟ್ಟರು. ಸ್ವಾಮೀಜಿ ಇನ್ನೆರಡು ದಿನದಲ್ಲಿ ಕೊಲ್ಕತಾಗೆ ಪ್ರಯಾಣ ಮಾಡಬೇಕಿತ್ತು.

'ಕ್ಯಾಸಲ್ ಕರ್ನನ್' ಸ್ವಾಮೀಜಿಗೆ ತುಂಬಾ ಪ್ರಿಯವಾಗಿಬಿಟ್ಟಿತ್ತು. ಆ ಮನೆಯ ಎಲ್ಲರೊಡನೆ ಅವರು ಸಂತೋಷದಿಂದ ಬೆರೆತರು. ಬಿಳಿಗಿರಿ–ಸೀತಮ್ಮನ ಆತಿಥ್ಯಕ್ಕೆ ತಲೆದೂಗಿದರು. ಪ್ರತಿ ಸಂಜೆ ದೇವರ ದೀಪ ಹಚ್ಚಿದೊಡನೆ ಆ ಮನೆಯ ಮಕ್ಕಳೆಲ್ಲಾ ಒಟ್ಟಿಗೆ ಕುಳಿತು ಹೇಳುತ್ತಿದ್ದ ಸ್ತೋತ್ರಪಾಠ ಅವರಿಗೆ ತುಂಬಾ ಹಿಡಿಸಿತು. ಕೃಷ್ಣಕರ್ಣಾಮೃತದ ಸ್ತೋತ್ರಗಳನ್ನು ಮಕ್ಕಳೆಲ್ಲಾ ಒಟ್ಟಾಗಿ ಹೇಳುವುದನ್ನು ಕಂಡು ಅವರು ಪರಮಾನಂದಭರಿತರಾದರು. ಪ್ರತಿದಿನ ಆಧ್ಯಾತ್ಮಿಕ ಪ್ರವಚನ ನಡೆಯಲಿ ಎಂದು ನಿರ್ದೇಶಿಸಿದರು. ರಾಮಾಯಣ ಮಹಾಕಾವ್ಯದ ಪ್ರವಚನ ಬಿಡದೆ ನಡೆಯಬೇಕೆಂದರು. ಮದ್ರಾಸ್‌ನ ಆ ಮನೆಯಲ್ಲಿ ಕಳೆದ ಒಂಬತ್ತು ದಿನಗಳೂ ಸ್ವಾಮೀಜಿಯವರಿಗೆ ಅತ್ಯಂತ ಪ್ರಿಯವಾಗಿತ್ತು.

ಸ್ವಾಮೀಜಿ ಹೊರಡುವ ದಿನ ಬಂದೇ ಬಿಟ್ಟಿತು. ಅಂದು ಅವರ ಮಿತ್ರವೃಂದಕ್ಕಂತೂ ತುಂಬಾ ಬೇಜಾರು. ಅಹರ್ನಿಶಿ ಕಾರ್ಯಗಳಿಂದ ಸ್ವಾಮೀಜಿ ಬಳಲಿದ್ದರು, ಅವರಿಗೆ ವಿಶ್ರಾಂತಿ ಬೇಕಿತ್ತು. ಬಿಳಿಗಿರಿಯವರ ಕುದುರೆ ಸಾರೋಟು ಮನೆಯ ಗೇಟಿನ ಬಂದು ನಿಂತಿತು. ಆ ಭವ್ಯಸೌಧದ ಮುಂಭಾಗದಲ್ಲಿ ಜನಸ್ತೋಮ ಸ್ವಾಮೀಜಿಯವರ ದರ್ಶನ ಪಡೆಯಲು ಕಾದಿತ್ತು. ಅವರು ಮದ್ರಾಸಿನ ಜನತೆಯ ಮೇಲೆ ಪ್ರಚಂಡ ಪ್ರಭಾವ ಬೀರಿದ್ದರು; ಅವರ ಹೃದಯದಾಳದಿಂದ ಬರುತ್ತಿದ್ದ ವಾಗ್ಝರಿಯನ್ನು ಕೇಳಿ ಜನ ಮಂತ್ರಮುಗ್ಧರಾಗಿದ್ದರು; ಅವರೊಡನೆ ಕಳೆದ ಪ್ರತಿ ಕ್ಷಣ – ಪ್ರತಿ ಘಳಿಗೆ ಮದ್ರಾಸಿನ ಜನರ ಮನದಾಳದಲ್ಲಿ ನಿಂತಿತು.

ಸ್ವಾಮೀಜಿ 'ಕ್ಯಾಸಲ್ ಕರ್ನನ್' ನ ಬಾಲ್ಕನಿಯಲ್ಲಿ ಬಂದು ನಿಂತರು. ಕೆಳಗೆ ಜನಸ್ತೋಮ ಅವರಿಗಾಗಿ ಕಾದಿತ್ತು. ಬಿಳಿಗಿರಿ, ಅವರ ತಮ್ಮ ರಾಮಾನುಜ ಮತ್ತು ಅವರಿಬ್ಬರ ಕುಟುಂಬದ ಎಲ್ಲಾ ಸದಸ್ಯರು ಸ್ವಾಮೀಜಿಯವರ ಕೋಣೆಯ ಬಳಿ ನಿಂತಿದ್ದರು. ಎಲ್ಲರನ್ನೂ ಬೀಳ್ಕೊಟ್ಟು ಸ್ವಾಮೀಜಿ ಬಿಳಿಗಿರಿಯವರ ಕಡೆ ತಿರುಗಿದರು. ಸೀತಮ್ಮನವರ ದುಃಖದ ಕಟ್ಟೆ ಒಡೆದಿತ್ತು. ಈ ಮಹಾಮಹಿಮರು ಈ ಒಂಬತ್ತು ದಿನಗಳಿಂದ ಈ ಮನೆಯನ್ನು ಪರಮಪವಿತ್ರವನ್ನಾಗಿಸಿದ್ದರು. ಅಂತಹ ಈಶ್ವರ ಸ್ವರೂಪಿ ಇಂದು ಎಲ್ಲರಿಂದ ಬೀಳ್ಕೊಂಡು ಹೊರಟಿದ್ದರು. ಬಿಳಿಗಿರಿಯ ಎಲ್ಲಾ ಚಿಕ್ಕಮಕ್ಕಳನ್ನೂ ಕರೆದು, ತಲೆಸವರಿ ಆಶೀರ್ವದಿಸಿದರು; ಮಕ್ಕಳ ಕೈಗೆ ಹಣ್ಣು ಕೊಟ್ಟರು. ಬಿಳಿಗಿರಿ–ಸೀತಮ್ಮ ಸ್ವಾಮೀಜಿಯವರ ಪಾದಕ್ಕೆರಗಿದರು. ಸೀತಮ್ಮನವರ ಕಣ್ಣಿಂದ ಕಣ್ಣೀರಿನ ಕೋಡಿ ಹರಿಯುತ್ತಿತ್ತು. ಸ್ವಾಮೀಜಿಯವರು ಕೂಡ ಅವರೆಲ್ಲರ ಪ್ರೀತಿಗೆ ಕರಗಿದ್ದರು. ಬಿಳಿಗಿರಿಯನ್ನು ಬಾಚಿ ತಬ್ಬಿಕೊಂಡು, "ಧೈರ್ಯದಿಂದ ಜೀವನವನ್ನು ಎದುರಿಸಬೇಕು, ಬಿಳಿಗಿರಿ" ಎಂದರು. ಅವರ ಒಬ್ಬನೇ ಮಗನಾದ ವರದುವಿನ ಕೈ ಹಿಡಿದುಕೊಂಡು, ಸ್ವಾಮೀಜಿ ಒಂದೊಂದೇ ಮೆಟ್ಟಿಲಿಳಿಯುತ್ತಿದ್ದರು. ಸೀತಮ್ಮ ಮತ್ತೊಮ್ಮೆ ಸ್ವಾಮೀಜಿ ನಿಂತಿದ್ದ ನೆಲವನ್ನು ಮುಟ್ಟಿ, ಅವರ ಚರಣಧೂಳಿ ತೆಗೆದುಕೊಂಡು ಅಲ್ಲೇ ಕುಸಿದುಬಿದ್ದರು. ಆ ಭವ್ಯ ಮಂಗಳ ಮೂರ್ತಿ ಕುದುರೆ ಸಾರೋಟಿನತ್ತ ಸಾಗಿತು. ಆ ದೇವದೇವ – ಎಲ್ಲರ ಮನವನ್ನು ಗೆದ್ದಿದ್ದ ಮೋಹಕ ದಿವ್ಯ ಧೀರ ಸಂನ್ಯಾಸಿ, ಮುಂದೆ ಸಾಗಿದರು. ಕುಟುಂಬದವರೆಲ್ಲರೂ ಆ ದಿವ್ಯ ಮಂಗಳ ಮೂರ್ತಿ ಹೋದ ದಾರಿಯನ್ನೇ ನೋಡುತ್ತಾ ನಿಂತಿದ್ದರು. **ಮಹಾದೇವನೇ ಕೈಲಾಸದಿಂದ ಕೆಳಗಿಳಿದು ಬಂದಿದ್ದ, ಆ ಮನೆಯ ದುಃಖವನ್ನು ಶಮನ ಮಾಡಲು........**